(ಇಂದು ದಿನಾಂಕಃ 24-01-2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ  ಬೋಧಿಸಲಾಯಿತು.)

**ಪಾಟೀ ಸವಾಲುಃ  ಪ್ರತಿವಾದಿ ಪರಃ ಶ್ರೀ ಎಸ್.ವಾಯ್.ಎಸ್. ವಕೀಲರಿಂದಃ**

ನಾನು ವಾದಿಯ ಜಿ.ಪಿ.ಎ. ಎಂದರೆ ಸರಿ. ವಾದಿ ಮಸ್ಕತ್‌ನಲ್ಲಿ ವ್ಯವಹಾರ ಮಾಡುತ್ತಿದ್ದು, ಅವರಿಗೆ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದೇ ಇರುವುದರಿಂದ ನನಗೆ ಜಿ.ಪಿ.ಎ. ಬರೆದುಕೊಟ್ಟಿದ್ದಾರೆ. ದಿನಾಂಕ 11-10-2014 ರಂದು ನನಗೆ ಜಿ.ಪಿ.ಎ. ಬರೆದುಕೊಟ್ಟಿದ್ದಾರೆ. ಸಾಕ್ಷಿ ಮುಂದುವರಿದು ದಿನಾಂಕ 25-05-2024 ರಂದು ಬರೆದುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಜಿ.ಪಿ.ಎ.

ಬರೆದುಕೊಡುವ ಮುಂಚೆ ನಡೆದಂತಹ ಘಟನೆಗಳು ನನಗೆ ಗೊತ್ತಿಲ್ಲ ಅನ್ನುವುದು ಸರಿಯಲ್ಲ. ವಾದಿ ಯಾರಿಗೆ ಹಣದ ಅವಶ್ಯಕತೆ ಇರುತ್ತದೆಯೋ ಅವರಿಗೆ ಹಣ ಕೊಡುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ, ವಾದಿಯ ಬಳಿ ರೂ. 10,00,000-00 ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಸಾಲ ಪಡೆದಿದ್ದರ ಸಲುವಾಗಿ ಒಪ್ಪಂದ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ, ವಾದಿಗೆ ದಾವಾ ಸ್ವತ್ತನ್ನು ರೂ. 32,00,000-00 ಗಳಿಗೆ ಮಾರಾಟ ಮಾಡಲು ಒಪ್ಪಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2014 ರಲ್ಲಿ ಘೋಟೆಗಾಳಿ ಗ್ರಾಮದಲ್ಲಿ 1 ಗುಂಟೆ ಜಮೀನಿಗೆ ಎಷ್ಟು ಬೆಲೆ ಇತ್ತು ಎಂದರೆ ಸಾಕ್ಷಿ 1 ಎಕರೆಗೆ ರೂ. 16,00,000-00 ರೂಪಾಯಿ ಬೆಲೆ ಇತ್ತು ಎಂದು ಹೇಳುತ್ತಾರೆ. ರೂ. 16,00,000-00 ಬೆಲೆ ಇತ್ತು ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಕ್ಷಿ ಪ್ರತಿವಾದಿ ಅಷ್ಟು ಇದೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಪ್ರತಿವಾದಿ ಆ ರೀತಿ ಹೇಳಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಘೋಟೆಗಾಳಿ ಗ್ರಾಮದಲ್ಲಿ 1 ಗುಂಟೆ ಜಮೀನಿಗೆ ಎಷ್ಟು ಬೆಲೆ ಇದೆ ಎಂದು ನನಗೆ ಗೊತ್ತಿಲ್ಲ.

ಒಂದು ಜಮೀನನ್ನು ಹಿಸ್ಸಾ ಮಾಡಬೇಕು ಎಂದರೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂದು ನನಗೆ ಗೊತ್ತಿಲ್ಲ. ಒಂದು ಜಮೀನನ್ನು ಹಿಸ್ಸಾ ಪೋಡಿ ಮಾಡಲು ಎಷ್ಟು ಖರ್ಚು ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 11-10-2014 ರ ನಂತರ ವಾದಿ ಪ್ರತಿ 3 ತಿಂಗಳಿನಲ್ಲಿ ಒಮ್ಮೆಯಾದರೂ ಪ್ರತಿವಾದಿಗೆ ಭೆಟ್ಟಿಯಾಗುತ್ತಿದ್ದರು. ಪ್ರತಿ 3 ತಿಂಗಳಿಗೊಮ್ಮೆ ವಾದಿ ಮಸ್ಕತ್‌ನಿಂದ ಬರುತ್ತಿದ್ದರು. 2014 ರಿಂದ ಇಲ್ಲಿಯವರೆಗೂ ವಾದಿ ಸುಮಾರು 25 ಬಾರಿ ಪ್ರತಿವಾದಿಗೆ ಭೆಟ್ಟಿಯಾಗಿದ್ದಾರೆ. ವಾದಿ ಪ್ರತಿವಾದಿಗೆ ಭೆಟ್ಟಿಯಾದಾಗ, ಪ್ರತಿವಾದಿ ಪೋಡಿ ಮಾಡಲು ಕೊಟ್ಟಿದ್ದೇವೆ, 2 ತಿಂಗಳಿನಲ್ಲಿ ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದರು. ವಾದಿ, ಪ್ರತಿವಾದಿಗೆ ಯಾವತ್ತೂ ಭೆಟ್ಟಿಯಾಗಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪೋಡಿ ಮಾಡುವ ಬಗ್ಗೆ ಕಂದಾಯ ಇಲಾಖೆಯಲ್ಲಿ

ವಿಚಾರಿಸಿದ್ದಾರೆ. 2015 ರಿಂದ ನಾವು ಕಂದಾಯ ಇಲಾಖೆಯಲ್ಲಿ ವಿಚಾರಿಸುತ್ತಾ ಬಂದಿದ್ದೇವೆ. ವಾದಿ ವಿಚಾರಿಸಿದಾಗ ಕಂದಾಯ ಇಲಾಖೆಯವರು ಪೋಡಿ ಮಾಡಲು ಹಾಕಿದ್ದು, ನಾವು ಮಾಡಿಕೊಡುತ್ತೇವೆ ಎಂದು ಹೇಳುತ್ತಿದ್ದರು. ವಾದಿ ಯಾವತ್ತೂ ಕಂದಾಯ ಇಲಾಖೆಗೆ ಹೋಗಿಲ್ಲ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಎಕರೆ 14 ಗುಂಟೆ 8 ಆಣೆ ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾನೆ ಎಂದರೆ ಸರಿ. ಆ ಬಗ್ಗೆ 2022 ರಲ್ಲಿ ನಮಗೆ ಗೊತ್ತಾಗಿದೆ. ಪ್ರತಿವಾದಿ ತನ್ನ ಸ್ವಂತ ಉಪಯೋಗಕ್ಕೆ ಪೋಡಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿ ತಂದೆಗೆ ಜಮೀನು ಇದ್ದು ಅವರು ಮೃತಪಟ್ಟ ನಂತರ ಪ್ರತಿವಾದಿ ಮತ್ತು ಅವರ ಸಹೋದರಿಯರಿಗೆ ಬಂದಿದೆ. ಪ್ರತಿವಾದಿಗೆ ಇಬ್ಬರು ಮಕ್ಕಳು ಇರಬಹುದು, ಸರಿಯಾಗಿ ಗೊತ್ತಿಲ್ಲ. ದಾವಾ ಸ್ವತ್ತನ್ನು ಬಿಟ್ಟು ಪ್ರತಿವಾದಿಗೆ ಬೇರೆ ಜಮೀನುಗಳು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಇಚ್ಛೆ ಇರಲಿಲ್ಲ ಅನ್ನುವುದು ಸರಿಯಲ್ಲ. ವಾದಿ ದಾವಾ ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಳ್ಳುವ ಇಚ್ಛೆ ಮತ್ತು ಸಿದ್ಧರಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ, ವಾದಿಗೆ ಜಮೀನನ್ನು ಮಾರಾಟ ಮಾಡುವ ಇಚ್ಛೆ ಇರದಿದ್ದರೂ ಸಹ ಅವರ ಅಜ್ಞಾನದಿಂದ ಗೈರು ಫಾಯದೆ ತೆಗೆದುಕೊಂಡು ಸುಳ್ಳು ಕ್ರಯದ ಕರಾರು ಪತ್ರ ಸೃಷ್ಠಿ ಮಾಡಿಕೊಂಡಿದ್ದೇವೆ ಅನ್ನುವುದು ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ವ್ಯವಹಾರ ಆಗಿಲ್ಲ ಅನ್ನುವುದು ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ಹಿಸ್ಸಾ ಮಾಡಿ ವಾದಿಗೆ ಮಾರಾಟ ಮಾಡುತ್ತೇನೆ ಎಂದು ಹೇಳಿದ್ದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 11-10-2014 ರಂದು ವಾದಿ ಪ್ರತಿವಾದಿಗೆ ರೂ. 10,00,000-00 ಸಾಲ ನೀಡಿದ್ದು, ಅದರ ಭದ್ರತೆಗಾಗಿ ಕ್ರಯದ ಕರಾರು ಪತ್ರವನ್ನು ವಾದಿ ಬರೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿಗೆ ಇನ್ನುಳಿದ ರೂ. 22,00,000-00 ಕ್ರಯದ ಹಣವನ್ನು ಕ್ರಯ ಪತ್ರ ನೋಂದಣಿ ಕಾಲಕ್ಕೆ ನೀಡುವುದಾಗಿ ಒಪ್ಪಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು

ಮಾರಾಟ ಮಾಡುವ ಬಗ್ಗೆ ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವುದೇ ಒಪ್ಪಂದ ಆಗಿಲ್ಲ ಅನ್ನುವುದು ಸರಿಯಲ್ಲ. ವಾದಿ, ಪ್ರತಿವಾದಿಗೆ ರೂ. 10,00,000-00 ಸಾಲ ನೀಡಿದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯದ ಕರಾರು ಪತ್ರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ಅರ್ಹರಲ್ಲ ಅನ್ನುವುದು ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ